## ರಾಮನ್‌ರ ಸ್ವಪ್ರತಿಷ್ಠೆ



ಸಿ.ವಿ. ರಾಮನ್

ತಮ್ಮ ಅಪೂರ್ವ ಸಂಶೋಧನೆಯ ಮೂಲಕ, ನೊಬೆಲ್ ಬಹುಮಾನ ಗಳಿಸಿ ಭಾರತಕ್ಕೆ ಹೆಮ್ಮೆ ತಂದುಕೊಟ್ಟ ಸರ್. ಸಿ.ವಿ. ರಾಮನ್ ತಮ್ಮ ಬಗ್ಗೆ ಅತಿಯಾದ ಹೆಮ್ಮೆ ಮತ್ತು ಅಹಂಕಾರ ಬೆಳೆಸಿಕೊಂಡು ತುಂಬು ಕುಟುಂಬದ ಇತರ ಸದಸ್ಯರನ್ನು ಅದರಲ್ಲೂ ಕಿರಿಯ ವಯಸ್ಸಿಗೆ ಮದುವೆಯಾಗುವ, ಹೆಚ್ಚಿನ ವಿದ್ಯಾಭ್ಯಾಸ ಮಾಡದ ಹೆಣ್ಣು ಮಕ್ಕಳ ಬಗ್ಗೆ ತಾತ್ಸಾರದಿಂದ ಮಾತಾಡುತ್ತಿದ್ದರಂತೆ. ರಾಮನ್‌ರ ಅತ್ತಿಗೆಯೂ ಹೆಚ್ಚು ವಿದ್ಯಾಭ್ಯಾಸ ಮಾಡದೆ ಆ ಮನೆಗೆ ಸೊಸೆಯಾಗಿ ಬಂದರಂತೆ. ಹೆಣ್ಣುಮಕ್ಕಳನ್ನು ಕೆಳದರ್ಜೆಯವರಂತೆ ಕಾಣುವ ರಾಮನ್‌ರ ನಡವಳಿಕೆ ಸಹಿಸದ ಆಕೆ, ರಾಮನ್‌ರ ಯಾವ ಸಹಾಯವೂ ಇಲ್ಲದೆ ಮುಂದೆ ಬರಬೇಕು ಮತ್ತು ಹೆಚ್ಚಿನದನ್ನು ಸಾಧಿಸಬೇಕು ಎಂದು ತನ್ನ ಮಗನನ್ನು ಹುರಿದುಂಬಿಸುತ್ತಿದ್ದರಂತೆ. ತುಂಬ ಮೇಧಾವಿತನ ಹೊಂದಿದ್ದ ಆ ಹುಡುಗ ಮುಂದೆ ಅಮೆರಿಕದಲ್ಲಿ ನೆಲೆಸಿ ವಿಶ್ವ ವಿಜ್ಞಾನದ ಪ್ರಮುಖ ವಿಷಯವಾದ 'ಕಪ್ಪುರಂಧ್ರ'ಗಳ ಕುರಿತು ಸಂಶೋಧನೆ ನಡೆಸಿ ನೊಬೆಲ್ ಬಹುಮಾನವನ್ನೂ ಗಳಿಸಿದರು. ಅವರ ಹೆಸರು ಸುಬ್ರಮಣ್ಯನ್ ಚಂದ್ರಶೇಖರ್! ನಕ್ಷತ್ರವೊಂದು ಉರಿದುಬಿದ್ದು ಕಪ್ಪು ಕುಳಿಯಾಗುವುದನ್ನು ವಿಜ್ಞಾನಿಗಳು 'ಚಂದ್ರಶೇಖರ್ ಲಿಮಿಟ್' ಎಂದು ಹೆಸರಿಸಿ ಶಾಶ್ವತ ಗೌರವ ನೀಡಿದ್ದಾರೆ. ಮಗನ ಏಳಿಗೆಯಿಂದ ಉತ್ತೇಜಿತರಾದ ತಾಯಿ ತಾವೂ ಸಹ ಸ್ವಯಂ ಓದಿನಿಂದ ಪದವಿಗಳಿಸಿ ಅಂದಿನ ಪತ್ರಿಕೆಗಳಿಗೆ ಉಪಯುಕ್ತ ಲೇಖನಗಳನ್ನೂ ಬರೆದರು. ರಾಮನ್‌ರ ಸ್ವಪ್ರತಿಷ್ಠೆ, ಇನ್ನೊಬ್ಬ ಮಹತ್ವದ ವಿಜ್ಞಾನಿಯನ್ನು ರೂಪಿಸಿ ಅಪರೂಪದ ಸಂಶೋಧನೆಗೆ ಕರಣವಾದದ್ದು ವಿಶೇಷವೇ ಸರಿ!

## ರಾಮನ್ - ಬೋಸ್ ಜಟಾಪಟಿ

ಜಗದೀಶ್ ಚಂದ್ರ ಬೋಸ್ ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವೃತ್ತಿಯಲ್ಲಿದ್ದಾಗ ಅವರ ಸಂಶೋಧನೆಯ ಕೆಲಸಕ್ಕೆ ಬೇಕಾದ ಪ್ರತ್ಯೇಕ ಪ್ರಯೋಗಾಲಯವೇ ಇರಲಿಲ್ಲ ಮತ್ತು ಯಾವುದೇ ಅನುದಾನವೂ ಅವರಿಗೆ ಸಿಗುತ್ತಿರಲಿಲ್ಲ. 'ಹಣವಿಲ್ಲದಿದ್ದರೂ ಸರಿ, ನನಗೊಂದು ಪ್ರಯೋಗಾಲಯ ಬೇಕು' ಎಂದಾಗ, ಯಾರೂ ಉಪಯೋಗಿಸದ ಶೌಚಾಲಯವನ್ನು ನೀಡಿ, ಏನು ಮಾಡುತ್ತೀರೋ ಮಾಡಿ ಎಂದು ಕಾಲೇಜಿನ ಆಡಳಿತ ಮಂಡಳಿ ಹೇಳಿತು. ಬೋಸ್ ತಮ್ಮ ಸ್ವಂತ ಹಣದಿಂದ ಶೌಚಾಲಯವನ್ನು ಪ್ರಯೋಗಾಲಯವನ್ನಾಗಿ ಪರಿವರ್ತಿಸಿ ಅಲ್ಲಿಯೇ ಸಂಶೋಧನೆ ಮುಂದುವರಿಸಿದರು. ತಮ್ಮ ಬಳಿ ಇದ್ದ ಏಕೈಕ ಸಹಾಯಕನನ್ನು ಉಪಯೋಗಿಸಿಕೊಂಡು ತಮ್ಮ ಸಂಶೋಧನೆಗೆ ಬೇಕಾದ ಹಲವು ಉಪಕರಣಗಳನ್ನು ತಾವೇ ತಯಾರಿಸಿಕೊಂಡರು. ವರ್ಷಗಳು ಕಳೆದಂತೆ ಬೋಸ್ ಜಗದ್ವಿಖ್ಯಾತರಾದರು. ಈ ಮಧ್ಯೆ ಸಿ.ವಿ. ರಾಮನ್ ಕೋಲ್ಕತ್ತಾ ವಿವಿಗೆ ಪ್ರಾಧ್ಯಾಪಕರಾಗಿ ಕೆಲಸಕ್ಕೆ ಸೇರಿಕೊಂಡಿದ್ದರು. ಬೋಸ್‌ರ ಬಳಿ ಕೆಲಸಕ್ಕಿರುವ ಸಹಾಯಕ ತುಂಬಾ ಪ್ರತಿಭಾವಂತ ಎಂದು ರಾಮನ್‌ಗೆ ಗೊತ್ತಿತ್ತು. ಆತನನ್ನು ದುಪ್ಪಟ್ಟು ಸಂಬಳ ನೀಡಿ ತನ್ನ ಕಡೆಗೆ ಸೆಳೆದುಕೊಳ್ಳಲು ರಾಮನ್ ಪ್ರಯತ್ನಿಸುತ್ತಿದ್ದುದು ಬೋಸ್‌ರಿಗೆ ತಿಳಿದಿತ್ತು. ಇದರಿಂದ ನೊಂದ ಬೋಸ್ ಉಪಕುಲಪತಿಗೆ ರಾಮನ್ ವಿರುದ್ಧ ದೂರು ನೀಡಿದ್ದರು!

## ಮೆಂಡಲ್‌ನ ಮೆಗಾ ಫೇಲ್ಯೂರ್

ಗ್ರಿಗರ್ ಮೆಂಡಲ್‌ನನ್ನು ಜಗತ್ತು ಆಧುನಿಕ ಜೀವಶಾಸ್ತ್ರದ ಹರಿಕಾರನೆಂದೇ ನೆನಪಿಸಿಕೊಳ್ಳುತ್ತದೆ. ಶಿಕ್ಷಕನಾಗಬೇಕೆಂಬ ಹಂಬಲ ಹೊಂದಿದ್ದ ಮೆಂಡಲ್‌ನನ್ನು ಆತನ ಶಿಕ್ಷಕರು, 'ನಿನಗೆ ಅಂತರ್‌ದೃಷ್ಟಿಯೇ ಇಲ್ಲ, ಶಿಕ್ಷಕನಾಗಲು ನಿನ್ನ ತಿಳಿವಳಿಕೆಯೂ ಸಾಲದು' ಎಂದು ಮೂದಲಿಸುತ್ತಿದ್ದರಂತೆ. ಸಂಶೋಧನೆಯ ಜೊತೆಗೆ ಶಿಕ್ಷಕನ ಕೆಲಸ ಮಾಡಿಕೊಂಡಿದ್ದ ಮೆಂಡಲ್ 1866ರಲ್ಲಿ ಬಟಾಣಿ ಸಸ್ಯದ ಕಸಿಗಳ ಕುರಿತು ನಡೆಸಿದ ಸಂಶೋಧನೆಯನ್ನು ಬ್ರನೋ ನ್ಯಾಚುರಲ್ ಹಿಸ್ಟರಿ ಸೊಸೈಟಿಯ ಪತ್ರಿಕೆಯಲ್ಲಿ ಪ್ರಕಟಿಸಿ ವಿಶ್ವದ ವಿಜ್ಞಾನಿಗಳ ಅಭಿಪ್ರಾಯ ತಿಳಿಯಲು ಕಾತುರನಾಗಿದ್ದ. ಹಲವು ವಿಜ್ಞಾನಿಗಳಿಗೆ ಪ್ರತ್ಯೇಕ ಪ್ರತಿಗಳನ್ನೂ ಅಂಚೆಯ ಮೂಲಕ ಕಳುಹಿಸಿದ್ದ. ಆದರೆ 1930ರವರೆಗೆ ಆತನ ಅಪರೂಪದ ಸಂಶೋಧನೆಯನ್ನು ಯಾರೂ ಲೆಕ್ಕಕ್ಕೆ ತೆಗೆದುಕೊಂಡಿರಲಿಲ್ಲ! ಮೆಂಡಲ್‌ಗೆ 'ನೊಬೆಲ್' ಬರಲಿಲ್ಲ. ಆದರೆ ಜೆನೆಟಿಕ್ ವಿಜ್ಞಾನಕ್ಕೆ ಬುನಾದಿ ಹಾಕಿದ ಮೆಂಡಲ್‌ನ ದಾರಿಯನ್ನನುಸರಿಸಿ ಸಂಶೋಧನೆ ಮಾಡಿದ ರಾಬರ್ಟ್ ಹೊಲ್ಲಿ, ಹರಗೋಬಿಂದ ಖೊರಾನಾ ಮತ್ತು ನಿರೇನ್‌ಬರ್ಗ್ ನೊಬೆಲ್ ಬಹುಮಾನ ಪಡೆದರು.

## ಐನ್‌ಸ್ಟೈನ್ ಚಾಚಿದ ನಾಲಗೆ



ಐನ್‌ಸ್ಟೈನ್

ಬಹುಶಃ ಐನ್‌ಸ್ಟೈನ್‌ರ ಚಾಚಿದ ನಾಲಗೆಯ ಚಿತ್ರವನ್ನು ನೋಡದವರು ಅತೀ ವಿರಳ ಎನ್ನಬಹುದು. ಅದು ಐನ್‌ಸ್ಟೈನ್‌ರ 72ನೇ ಹುಟ್ಟುಹಬ್ಬದ ಸಂಭ್ರಮದ ದಿನ. ಡಿನ್ನರ್ ಮುಗಿದ ನಂತರವೂ ಫೋಟೊ ಶೂಟ್ ನಡೆಯುತ್ತಲೇ ಇತ್ತು. ಫೋಟೋಗ್ರಾಫರ್ಸ್ ಮಾತ್ರ ಇನ್ನೊಂದು, ಮತ್ತೊಂದು ಎಂದು ಚಿತ್ರ ತೆಗೆಯುತ್ತಲೇ ಇದ್ದರು. 'ನನ್ನನ್ನು ಮನೆಗೆ ಹೋಗಲು ಬಿಡಿ' ಎಂದು ಕಾರು ಹತ್ತಿ ಕೂತರೂ ಅಲ್ಲಿಗೂ ಬೆನ್ನಟ್ಟಿದ ಕ್ಯಾಮರಾಮನ್‌ಗಳ ವರ್ತನೆಯಿಂದ ರೇಗಿದ ಐನ್‌ಸ್ಟೈನ್ – 'ಆಯಿತು ನಿಮ್ಮಿಷ್ಟ, ತೆಗೆಯಿರಿ ಎಂದು ಕಾರಿನಲ್ಲಿ ಕುಳಿತೇ ನಾಲಿಗೆ ಹೊರಚಾಚಿ ಕೀಟಲೆಯ ಪೋಸ್ ನೀಡಿದರು. ಆರ್ಥರ್ ಸೆಸ್ಸೆ ಎಂಬ ಛಾಯಾಗ್ರಾಹಕ ತಟ್ಟನೇ ಈ ಚಿತ್ರ ತೆಗೆದು ನಂತರ ಅದನ್ನು ಐನ್‌ಸ್ಟೈನ್‌ಗೆ ನೀಡಿದರು. ಮೂಲ ಚಿತ್ರದಲ್ಲಿ ಬರ್ತ್‌ಡೇ ಪಾರ್ಟಿ ಹೋಸ್ಟ್ ಮಾಡಿದ್ದ ಡಾ.ಫ್ರಾಂಕ್ ಡಿಲೋಟ್ ಸಹ ಚಿತ್ರದಲ್ಲಿದ್ದರಂತೆ. ತಮ್ಮ ಹೊರಚಾಚಿದ ನಾಲಗೆಯ ಚಿತ್ರವನ್ನು ಬಹುವಾಗಿ ಮೆಚ್ಚಿಕೊಂಡ ಐನ್‌ಸ್ಟೈನ್, ನಾಜೂಕಾಗಿ ಫ್ರಾಂಕ್‌ರ ಚಿತ್ರವನ್ನು ಬೇರ್ಪಡಿಸಿ, ಹಲವಾರು ಪ್ರತಿ ಮುದ್ರಿಸಿಕೊಂಡು ತನ್ನ ಸ್ನೇಹಿತರಿಗೆಲ್ಲಾ ಗ್ರೀಟಿಂಗ್ ಕಾರ್ಡ್‌ನಂತೆ ಕಳಿಸಿದರಂತೆ!

ಇನ್ನೊಂದು ಪ್ರಸಂಗದಲ್ಲಿ ರಾಣಿಯ ಆಹ್ವಾನದ ಮೇರೆಗೆ ಬೆಲ್ಜಿಯಂನ ರೈಲ್ವೇ ನಿಲ್ದಾಣಕ್ಕೆ ಐನ್‌ಸ್ಟೈನ್ ಬಂದಾಗ ನಿಲ್ದಾಣದ ಬಳಿ ಸಾವಿರಾರು ಜನ ಬಾಜಾ ಬಜಂತ್ರಿಯೊಂದಿಗೆ ಸಿದ್ಧಗೊಂಡಿದ್ದರು. ಸರಳತೆ ಜೀವನಶೈಲಿ ಇಷ್ಟ ಪಡುತ್ತಿದ್ದ ಐನ್‌ಸ್ಟೈನ್, 'ಯಾರೋ ದೊಡ್ಡ ಮನುಷ್ಯರ ಸ್ವಾಗತಕ್ಕಾಗಿ ಇವರೆಲ್ಲ ಉತ್ಸಾಹದಿಂದ ಸೇರಿದ್ದಾರೆ' ಎಂದು ಭಾವಿಸಿ ತಮ್ಮ ಬ್ಯಾಗ್ ಮತ್ತು ವಯೊಲಿನ್ ವಾದ್ಯದೊಂದಿಗೆ ರೈಲ್ವೇ ಸ್ಟೇಷನ್‌ನ ಹೊರಗೆ ಬಂದು ನಡೆದೇ ಅರಮನೆ ತಲುಪಿಕೊಂಡರಂತೆ. ಇವರಿಗೆ ಗ್ರ್ಯಾಂಡ್ ವೆಲ್‌ಕಂ ನೀಡಲು ರಾಣಿಯೇ ನಿಯೋಜಿಸಿದ್ದ ತಂಡ, 'ಐನ್‌ಸ್ಟೈನ್‌ರನ್ನು ನಾವು ನೋಡಲೇ ಇಲ್ಲ' ಎಂದು ಹಿಂತಿರುಗಿ ಬಂದು ವರದಿ ಒಪ್ಪಿಸಿತಂತೆ.